ಮೂಲಕ ಉತ್ತರಿಸುವ 92 ಪ್ರಶ್ನೆಗಳ ಪೈಕಿ 76 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅನುಬಂಧ – (ಅ)

ಶ್ರೀ ಕೆ.ಪಿ. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಪ್ರಶ್ನೆಗಳಿಗೆ ಉತ್ತರಗಳು ಬರುತ್ತಿಲ್ಲ. ಸದನದಲ್ಲಿ ಮಂಡಿಸುವ ಪ್ರಶ್ನೆಗಳಿಗೆ ಉತ್ತರಗಳು ನಿನ್ನೆಯೂ ಕೂಡ ಬಂದಿಲ್ಲ. ಪ್ರತಿದಿನ ಇದು ಪುನರಾವರ್ತನೆಯಾಗುತ್ತದೆ. ಪ್ರಶ್ನೆಗಳಿಗೆ ಸರಿಯಾದ ಉತ್ತರಗಳು ಎಲ್ಲದಕ್ಕೂ ಬರುತ್ತಿಲ್ಲ.

ಅಧ್ಯಕ್ಷರು : ಕೊಡಿಸುತ್ತೇನೆ. ಈಗ ಶೂನ್ಯವೇಳೆ. ದಿನಕರ್ ಶೆಟ್ಟಿಯವರು ತಾವು ಕೇಳಿ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :–

ಅ) ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಲ್ಲಿ ಭಾರಿ ಮಳೆ ಮತ್ತ ಗಾಳಿಯಿಂದ ಸುಮಾರು 80ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದುಬಿದ್ದು, ಅಲ್ಲಿನ ಜನ ಕತ್ತಲ್ಲಿರುವ ಬಗ್ಗೆ

ಶ್ರೀ ದಿನಕರ ಕೆ. ಶೆಟ್ಟಿ (ಕುಮುಟಾ) :– ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಕುಮುಟಾ ತಾಲ್ಲುಕಿನಲ್ಲಿ ಭಾರಿ ಮಳೆ ಮತ್ತು ಗಾಳಿಯಿಂದಾಗಿ ಸುಮಾರು 80ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಇದರಿಂದಾಗಿ ಇಲ್ಲಿನ ನಾಗರೀಕರು ಕತ್ತಲಲ್ಲಿ ಕಾಲ ಕಳೆಯುವಂತಹ ಪ್ರಸಂಗ ಏರ್ಪಟ್ಟಿರುತ್ತದೆ. ಅದಲ್ಲದೇ ಇಲ್ಲಿರುವ ರಾಜಕಾಲುವೆಯು ಮಣ್ಣಿನಿಂದ ಮುಚ್ಚಿ ಹೋಗಿದ್ದು, ರಾಜಕಾಲುವೆಯಲ್ಲಿರುವ ಹೂಳನ್ನು ಕೂಡಲೇ ತೆಗೆಯಬೇಕಾಗಿರುತ್ತದೆ. ವಿದ್ಯುತ್ ಕಂಬಗಳನ್ನು ದುರಸ್ಥಿಗೊಳಿಸಿ ವಿದ್ಯುಚ್ಛಕ್ತಿಯನ್ನು ಕುಮುಟಾ ತಾಲ್ಲೂಕಿಗೆ ಒದಗಿಸಲು ಸುಮಾರು 50 ಲಕ್ಷ ರೂಪಾಯಿಗಳನ್ನು rain damage ನ ವತಿಯಿಂದ ಈ ವ್ಯವಸ್ಥೆಯನ್ನು ತ್ವರಿತವಾಗಿ ಕಾರ್ಯಾಚರಣೆ ಕೈಗೊಳ್ಳಲು ಮಾನ್ಯ ಅಧ್ಯಕರ ಮೂಲಕ ಇದನ್ನು ಪ್ರಸ್ತಾಪಿಸುತ್ತಿದ್ದೇನೆ. ನನಗೆ ಇನ್ನೂ ಉತ್ತರ ಬಂದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುತ್ತಿದ್ದೇನೆ.

ಕುಮುಟಾ ತಾಲ್ಲೂಕಿನಲ್ಲಿ ಗಾಳಿ ಮಳೆಯಿಂದಾಗಿ ಆದ ಹಾನಿಯ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಕಾರವಾರ ಇವರಿಂದ ವರದಿಗಳು ಬಂದಿದ್ದು, ಕಾರವಾರದಲ್ಲಿ ಲೈನುಗಳ ರಿಪೇರಿ ಮತ್ತು ನಿರ್ವಹಣೆ

ಸಲುವಾಗಿ ಮತ್ತು ಉಪ ಕೇಂದ್ರದಲ್ಲಿ ಸಣ್ಣಪುಟ್ಟ ದುರಸ್ಥಿಗಳಿಗಾಗಿ ರೂ. 36 ಲಕ್ಷಗಳ ಬಜೆಟ್‌ನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ರೂ. 34 ಲಕ್ಷದಷ್ಟು ಖರೀದಿ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಇದಲ್ಲದೇ ಈ ರೀತಿ ಲೈನು ನಿರ್ವಹಣೆಗೆ ಬೇಕಾದ ಕಂಬ, ತಂತಿ ಮತ್ತಿತರ ಸಾಮಗ್ರಿಗಳನ್ನು ಒದಗಿಸಲಾಗಿದೆ ಮತ್ತು ಈ ನಿರ್ವಹಣೆಗೆ 10 ಜನ ಕಾರ್ಮಿಕರನ್ನು ಮತ್ತು ಒಂದು ವಾಹನವನ್ನು ಗುತ್ತಿಗೆ ಆಧಾರದ ಮೇಲೆ ಒದಗಿಸಲಾಗಿದೆ. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಅಧಿಕಾರಿಗಳಿಗೆ ಜಿಲ್ಲಾ ಆಡಳಿತದೊಡನೆ ಸತತ ಸಂಪರ್ಕದಲ್ಲಿರಲು ಸೂಚಿಸಲಾಗಿದ್ದು ಯಾವುದೇ ತುರ್ತು ಸಂದರ್ಭವನ್ನು ಎದುರಿಸುವ ತಯಾರಿಯಲ್ಲಿರಲು ಸಿದ್ಧಗೊಳಿಸಲಾಗಿದೆ. ಇದಲ್ಲದೇ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ನೌಕರರಿಗೆ ಮಳೆಗಾಲದಲ್ಲಿ ಬೇಕಾಗುವ ರೈನ್‌ಕೋಟ್, ಗಮ್‌ಬೂಟ್, ಟೂಲ್ ಕಿಟ್ ಇತ್ಯಾದಿಗಳನ್ನು ಸಹ ಒದಗಿಸಲಾಗಿದೆ. ಕಾರವಾರ ವಿಭಾಗದ ಉಗ್ರಾಣದಲ್ಲಿ 241 ಸಂಖ್ಯೆ ಕಂಬಗಳು 30 ಕಿಲೋ ಮೀಟರ್ ವೈರ್‌ಗಳು ಮತ್ತಿತರ ಸಾಮಗ್ರಿಗಳ ದಾಸ್ತಾನು ಇದ್ದು, ವಿದ್ಯುತ್ ಸಂಪರ್ಕ ಪುನರ್ ಸ್ಥಾಪಿಸುವ ಕೆಲಸದಲ್ಲಿ ಯಾವುದೇ ವಿಳಂಬ/ವ್ಯತ್ಯಯವಾಗದಂತೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಕ್ರಮ ವಹಿಸಿದೆ.

ಕುಮಟಾ ಪುರಸಭೆ ವ್ಯಾಪ್ತಿಯಲ್ಲಿ ಸ. ನಂ. 556, 564 ರಲ್ಲಿ ಕುಡ್ತಗಿಬೈಲ್ ನಿಂದ ಮೆಕೆಂಜಿ ಬ್ರಿಜ್‌ವರೆಗೆ ಅಂದಾಜು 1.00 ಕಿ.ಮೀ. ವ್ಯಾಪ್ತಿಯ ಕಾಲುವೆ ಇತ್ತೀಚಿನ ದಿನಗಳಲ್ಲಿ ಹೂಳು ತುಂಬಿ ಮುಚ್ಚಿರುವುದರಿಂದ ಮಳೆಗಾಲದಲ್ಲಿ ಮಳೆಯ ನೀರು ಸದರಿ ಕಲುವೆಯಿಂದ ಸರಾಗವಾಗಿ ಹರಿಯದೇ ಅಕ್ಕ-ಪಕ್ಕದ ಮನೆಗಳಿಗೆ ನೀರು ನುಗ್ಗುವ ಪರಿಸ್ಥಿತಿ ಉಂಟಾಗಿದ್ದು, ದಿನಾಂಕ : 26-06-2010 ರಂದು ಭಾರೀ ಮಳೆಗೆ ನೀರು ಮನೆಗಳಿಗೆ ನುಗ್ಗಿರುತ್ತದೆ. ಕೂಡಲೇ ಹಿಟಾಚಿ ಯಂತ್ರದಿಂದ ಅವಶ್ಯ ಸ್ಥಳದಲ್ಲಿ ಹೂಳನ್ನು ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿರುತ್ತದೆ. ಸದರಿ ಕಾಲುವೆ ಸಂಪೂರ್ಣ ಹೂಳು ತೆರವುಗೊಳಿಸಿ ಎರಡು ಬದಿ ಪಿಚ್ಚಿಂಗ್ ಮಾಡುವ ಬಗ್ಗೆ ರೂ. 48.00 ಲಕ್ಷದ ಅಂದಾಜು ತಯಾರಿಸಲಾಗಿದೆ. ಈ ಮೊತ್ತವು ಅಧಿಕವಾಗಿರುವುದರಿಂದ ಪುರಸಭೆ ನಿಧಿಯಿಂದ ಕೂಡಲೇ ಭರಿಸಿ ಕ್ರಮ ಕೈಗೊಳ್ಳಲು ಸಾಧ್ಯವಾಗದಿರುವ ಪ್ರಯುಕ್ತ ಇದನ್ನು ಪ್ರಕೃತಿ ವಿಕೋಪ ನಿಧಿಯಡಿಯಲ್ಲಿ ವಿಶೇಷವಾಗಿ ಅನುದಾನ ಬಿಡುಗಡೆ ಮಾಡುವಂತೆ ವರದಿಯನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಉತ್ತರ ಕನ್ನಡ, ಕಾರವಾರ ಇವರ ಮುಖಾಂತರ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ ಇವರಿಗೆ ಸಲ್ಲಿಸಲಾಗಿದೆ. ಪರ್ಯಾಯವಾಗಿ ಸದರಿ ಹಣವನ್ನು ಕುಮಟ ಪುರಸಭೆಗೆ ಬಿಡುಗಡೆಯಾಗುವ 2010-11 ನೇ ಸಾಲಿನ ಎಸ್.ಎಫ್.ಸಿ.

(State finance Commission) ಅನುದಾನದಲ್ಲಿ ಕಾಯ್ದಿರಿಸಿಕೊಂಡು ಸದರಿ ಕಾಮಗಾರಿಗೆ ಟೆಂಡರ್ ಕರೆದು ನಿಯಮದಂತೆ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಅಧ್ಯಕ್ಷರು : ಆಯಿತು. ಇದು ಶೂನ್ಯವೇಳೆಯಾದ್ದರಿಂದ, ಪ್ರಸ್ತಾಪಕ್ಕೆ ಮಾತ್ರ ಅವಕಾಶ ಇರುತ್ತದೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ಲೈಟ್ ಕಂಬಕ್ಕೆ ಮತ್ತು ಇತರೆ ಕೆಲಸಗಳಿಗೆ 34 ಲಕ್ಷ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ಅಲ್ಲಿ ಕೆಲಸ ಆಗುತ್ತಿಲ್ಲ. ಆದ್ದರಿಂದ, ಕೆಲವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಈಗಾಗಲೇ ವಿದ್ಯುತ್ ಇಲ್ಲದೆ ಕತ್ತಲೆಯಲ್ಲಿ ಜನ ಕಾಲ ಕಳೆಯುತ್ತಿದ್ದಾರೆಂದು ನಮ್ಮ ಶಾಸಕರು ಸರ್ಕಾರದ ಗಮನ ಸೆಳೆದಿದ್ದಾರೆ. ಹಣ ಬಿಡುಗಡೆ ಮಾಡಲಾಗಿದೆ ಮತ್ತೆ ಕಂಬ ವೈರ್ ಅಲ್ಲಿದೆ ಎಂದು ಹೇಳುತ್ತಿದ್ದೀರಿ. ಆದರೆ, ಕೆಲಸ ಪ್ರಾರಂಭ ಮಾಡಿಲ್ಲ. ಅಲ್ಲಿನ ಜನರು ಕತ್ತಲೆಯಲ್ಲಿ ಕಾಲ ಕಳೆಯುತ್ತಿದ್ದಾರೆ. ಆದ್ದರಿಂದ, ಯಾವಾಗ ಕೆಲಸ ಪ್ರಾರಂಭ ಮಾಡಲಾಗುತ್ತದೆಂದು ಹೇಳಿ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ಈಗ ಟೆಂಡರ್ ಪ್ರೊಸೆಸ್ ನಡೆಯುತ್ತಿದೆ. ಈ ಪ್ರಕ್ರಿಯೆ ಆದ ತಕ್ಷಣ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಕಾಲುವೆಯಲ್ಲಿ ಹೂಳೆತ್ತುವುದಕ್ಕಾಗಿ ಟೆಂಡರ್ ಪ್ರಕ್ರಿಯೆ ಆಗಿರುವುದು. ಆದರೆ, ಲೈಟ್ ಕಂಬದ ವಿಚಾರ ನಾವು ಮಾತನಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಆದಷ್ಟು ಶೀಘ್ರವಾಗಿ ಕೆಲಸ ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು :– ಆಯಿತು.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅವರು ಹೊಸ ಸದಸ್ಯರಿದ್ದಾರೆ. ಅವರಿಗೆ ದಯಮಾಡಿ ಅವಕಾಶ ಕೊಡಿ. ಅವರ ಗೋಳನ್ನು ಮಾನ್ಯ ಸಚಿವರು ಕೇಳಿ ಉತ್ತರ ಕೊಡಲಿ.

ಅಧ್ಯಕ್ಷರು :– ಹೊಸ ಸದಸ್ಯರು ಮಾತನಾಡುವುದಕ್ಕೆ ನೀವೇ ಬಿಡುತ್ತಿಲ್ಲವಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಶೀಘ್ರವಾಗಿ ಕೆಲಸ ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು :– ಆದಷ್ಟು ಬೇಗ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ. ತಾವು ಕುಳಿತುಕೊಳ್ಳಿ.